(INTERUPTIONS)

SRI. K.N. NAGEGOWDA :- Sir, it is a judgement. We will discuss. ನಾನು ನಿಮಗೆ ಕಾಪಿಯನ್ನು ಕಳುಹಿಸಿಕೊಡುತ್ತೇನೆ, ತಾವುಗಳು ನೋಡಿ, ನಾವುಗಳೆಲ್ಲರೂ ಕುಳಿತುಕೊಂಡು ಚರ್ಚೆಯನ್ನು ಮಾಡೋಣ.

MR. SPEAKER :- Please circulate the copy.

(4) ಗಮನ ಸೆಳೆಯುವ ಸೂಚನೆ

ವಿಷಯ :- (ಅ) ರಾಜ್ಯದಲ್ಲಿ ಮಟ್ಕಾ ಜೂಜಿನ ಹಾವಳಿಯಿರಿದ ಜನರಿಗೆ ಉಂಟಾಗಿರುವ ತೊಂದರೆ.

ಶ್ರೀ ಆರ್. ನಾರಾಯಣ (ಬೆಳ್ಳಾವಿ) :- ರಾಜ್ಯದಲ್ಲಿ ಮಟ್ಕಾಜೂಜಿನ ಹಾವಳಿಯಿಂದ ಜನರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ **ಶ್ರೀ ಆರ್. ರೋಷನ್ ಬೇಗ್** (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಟ್ಕಾ ಮತ್ತು ಜೂಜಾಟ ಇದೊಂದು ಸಾಮಾಜಿಕ ಪಿಡುಗಾಗಿದ್ದು ಇದರಿಂದ ಲಕ್ಷಾಂತರ ಕುಟುಂಬಗಳು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ತೊಂದರೆ ಅನುಭವಿಸುತ್ತಿದ್ದಾರೆ. ಈ ಅನಿಷ್ಠ ಪಿಡುಗನ್ನು ನಿರ್ಮೂಲನ ಮಾಡಲು ರಾಜ್ಯ ಪೋಲೀಸರು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಪೋಲೀಸರು ತೆಗೆದುಕೊಂಡು ಕಟ್ಟುನಿಟ್ಟಿನ ಕ್ರಮದಿಂದಾಗಿ ಮಟ್ಕಾ ಮತ್ತು ಜೂಜಾಟ ಪ್ರಕರಣಗಳಲ್ಲಿ ಗಮನಾರ್ಹ ಇಳಿಮುಖವಾಗಿದೆ. ಜೂಜಾಟವನ್ನು ವೃತ್ತಿಯನ್ನಾಗಿ ಮಾಡಿಕೊಂಡು ತನ್ನ ಕುಟುಂಬ ಹಾಗೂ ಸಮಾಜಕ್ಕೆ ಹೊರೆಯಾಗಿರುವ ವ್ಯಕ್ತಿಗಳಿಗೆ ಪೋಲೀಸರು ನಡೆಸುವ ದಾಳಿಯಿಂದಾಗಿ ಈ ಜೂಜಾಟವನ್ನು ಬಿಡಬೇಕಾಗಿ ಬಂದಿರುವ ಪರಿಸ್ಥಿತಿ ಒದಗಿಬಂದಿದೆ. ಅಲ್ಲದೆ ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಪೋಲೀಸರು ಪತ್ತೆ ಹಚ್ಚಿರುವ ಮಟ್ಕಾ ಮತ್ತು ಜೂಜಾಟದ ಪ್ರಕರಣಗಳನ್ನು ಗಮನಿಸಿದರೆ ಇತ್ತೀಚಿನ ವರ್ಷಗಳಲ್ಲಿ ಇದು ಕಡಿಮೆಯಾಗಿದೆ ಎಂಬ ಅಂಶ ಗಮನಾರ್ಹವಾದುದು, ಈ ಸಾಮಾಜಿಕ ಪಿಡುಗನ್ನು ಪೂರ್ತಿಯಾಗಿ ತೊಲಗಿಸುವುದೇ ಸರ್ಕಾರದ ನೀತಿಯಾಗಿದ್ದು ಎಷ್ಟೋ ಮಟ್ಕಾ ಮತ್ತು ಜೂಜಾಟದ ಕೇಂದ್ರಗಳನ್ನು ಬೆಂಗಳೂರು ಸೇರಿ ಕೆಲವೊಂದು ನಗರಗಳಲ್ಲಿ ಮುಚ್ಚಲಾಗಿವೆ. ಸರ್ಕಾರ 1985 ರಲ್ಲಿ ಆಂಟಿ ಗೂಂಡಾ ಕಾಯ್ದೆಯನ್ನು ರಚಿಸಲಾಗಿದ್ದು ಇದರಡಿಯಲ್ಲಿ ಮಟ್ಕಾ ಮತ್ತು ಜೂಜಾಟದ ದಂಧೆಯಲ್ಲಿರುವ ದುಷ್ಕರ್ಮಿಗಳನ್ನು ಒಂದು ವರ್ಷದ ವರೆಗೆ ಬಂಧನದಲ್ಲಿಡುವುದಕ್ಕೆ ಪೋಲೀಸ್ ಆಯುಕ್ತರಿಗೆ ಮತ್ತು ಜಿಲ್ಲಾ ದಂಡಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಹಾಗೂ ಇತರೆ ನಗರ ಪಟ್ಟಣಗಳಲ್ಲಿ ಜೂಜಾಟದ ಕೇಂದ್ರಗಳು ಮುಚ್ಚಿರುವುದನ್ನು ಗಮನಿಸಬಹುದು.

ಮಟ್ಕಾ ಮತ್ತು ಜೂಜಾಟಕ್ಕಿಂತ ಇನ್ನೊಂದು ಬಡಜನತೆಯ ಶೋಷಣೆಗೆ ಅವಕಾಶವಾಗಿದ್ದ ಒಂದಂಕಿ ಲಾಟರಿ ಮಾರಾಟವನ್ನು ಸಹ ಬೆಂಗಳೂರು ನಗರದಲ್ಲಿ ಸಂಪೂರ್ಣವಾಗಿ ಹಾಗೂ ಇತರೆ ಪಟ್ಟಣಗಳಲ್ಲಿ ನಿಲ್ಲಿಸಲಾಗಿದ್ದು, ಕೆಲವೆಡೆ ನಡೆಯುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಪೋಲೀಸರು ಕ್ರಮ ಕೈಗೊಳ್ಳುತ್ತಿದ್ದಾರೆ. ಆದ್ದರಿಂದ ರಾಜ್ಯದಲ್ಲಿ ಮಟ್ಕಾ ಹಾಗೂ ಜೂಜಾಟದ ಹಾವಳಿ ಹೆಚ್ಚಾಗಿದೆ ಎಂಬುದು ನಿಜವಲ್ಲ, ರಾಜ್ಯ ಪೋಲೀಸರು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪತ್ತೆ ಹಚ್ಚಿದ ಪ್ರಕರಣ ಹಾಗೂ ಜೂಜುಕೋರರಿಂದ ವಶ ಪಡಿಸಿಕೊಂಡ ಹಣದ ಮೊತ್ತದ ಬಗ್ಗೆ ಪರಿಶೀಲಿಸಿದಾಗ ಈ ನಿಜಾಂಶವನ್ನು ತಿಳಿಯಬಹುದು.

	ಮಟ್ಕಾ			ಜೂಜಾಟ		
ವರ್ಷ	ಪತ್ತೆಯಾದ ಪ್ರಕರಣಗಳು	ಆರೋಪಿಗಳ ಬಂಧನ	ವಶಪಡಿಸಿಕೊಂಡ ಜೂಜಿನ ಮೊತ್ತ	ಪತ್ತೆಯಾದ ಪ್ರಕರಣಗಳು	ಆರೋಪಿಗಳ ಬಂಧನ	ವಶಪಡಿಸಿಕೊಂಡ ಜೂಜಿನ ಮೊತ್ತ
1993	3122	4194	12,16,974	2588	10943	12,32,940
1994	2768	4216	19,87,730	2926	16118	16,85,192
1995	2361	4007	11,43,684	2559	9210	25,72,464
1996	580	949	3,28,575	1123	8290	23,27,109

ಮಟ್ಕಾ ಮತ್ತು ಜೂಜಾಟದ ಬಗ್ಗೆ ಜಿಲ್ಲಾ ಪೋಲೀಸ್ ಅಧೀಕ್ಷಕರ ನೇತೃತ್ವದಲ್ಲಿ ಪ್ರತಿ ತಿಂಗಳು ನಡೆಯುವ ಅಪರಾಧ ಸಭೆಯಲ್ಲಿ ಚರ್ಚಿಸಲಾಗುತ್ತಿದೆ ಅಲ್ಲದೆ ಇಂತಹ ಪ್ರಕರಣಗಳು ನಡೆಯುವ ಠಾಣಾವ್ಯಾಪ್ತಿ ಅಧಿಕಾರಿಗಳಿಗೆ ಸದರಿ ಸಭೆಯಲ್ಲಿ ಎಚ್ಚರಿಕೆಯನ್ನು ಸಹ ನೀಡಲಾಗುತ್ತಿದೆ.

ರಾಜ್ಯದ ಯಾವುದೇ ಠಾಣೆಯ ವ್ಯಾಪ್ತಿಯಲ್ಲಿ ಮಟ್ಕಾ ಹಾಗೂ ಜೂಜಾಟವನ್ನು ನಿಯಂತ್ರಿಸುವ ಹಿನ್ನೆಲೆಯಲ್ಲಿ ಆ ಠಾಣಾಧಿಕಾರಿ ಯಾವ ಯಾವ ಕ್ರಮಗಳನ್ನು ಜೂಜುಕೋರರ ವಿರುದ್ಧ ತೆಗೆದುಕೊಳ್ಳಬೇಕೆಂಬ ಬಗ್ಗೆ ಸಂಪೂರ್ಣ ಆದೇಶವನ್ನು ಪೋಲೀಸ್ ಪ್ರಧಾನ ಕಛೇರಿಯ ಪತ್ರ ಸಂಖ್ಯೆ : ಎಸ್‌ಎಂಎಸ್ (4) :312 :92-93, ದಿನಾಂಕ 1-1-93, ಸ್ಥಾಯಿ ಆದೇಶ ಸಂಖ್ಯೆ 913 ರಲ್ಲಿ ನೀಡಲಾಗಿದೆ.

+ **ಶ್ರೀ ಆರ್. ನಾರಾಯಣ :–** ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರ ಹೇಳಿಕೆಯಿಂದ ಸ್ವಲ್ಪ ಸಮಾಧಾನವಾಗಿದ್ದರೂ ಸಹ ಇತ್ತೀಚಿನ ದಿನಗಳಲ್ಲಿ ನಾವು ಪ್ರವಾಸವನ್ನು ಮಾಡಿದ್ದಂತಹ ಕಾಲದಲ್ಲಿ ಈ ಮಟ್ಕಾ ಹಾವಳಿ ಆದರಲ್ಲಿಯೂ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ವ್ಯಾಪಕವಾಗಿದೆ. ಇದಕ್ಕೆ ಕಾರಣ ಏನೆಂದರೆ, 50 ಪೈಸೆ ಮತ್ತ 1 ರೂಪಾಯಿಗಳ ಬಹಳ ಕನಿಷ್ಟವಾದಂತಹ ಹಣವನ್ನು ತೊಡಗಿಸಬಹುದು. ಇದು ಬಡವರು ಮತ್ತು ಮಧ್ಯಮ ವರ್ಗದವರು ಆಡುವಂಥದ್ದಾಗಿದೆ. ಇದರ

ಸ್ಪೇಕ್ ಏನಿದೆಂದರೆ 1:80, 1:100 ಇದೆ. ಈಗಾಗಲೇ ಜೂಜಾಟದ ಬಗ್ಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಎಲ್ಲರಿಗೂ ಮುಕ್ತವಾಗಿ ಸಾರಾಯಿಯನ್ನು ಮಾರಾಟ ಮಾಡುತ್ತಿದ್ದೇವೆ. ಕಾಲ ಕಾಲಕ್ಕೆ ಸಾರಾಯಿಯನ್ನು ಸರಬರಾಜು ಮಾಡುವ ಬಗ್ಗೆ ಖಾತರಿಯನ್ನು ಪಡಿಸಿ ಕೊಂಡಿದ್ದೇವೆ. ಆದರ ಒಂದು ಚಟಕ್ಕೆ ಇವತ್ತು ಯುವ ಶಕ್ತಿ ಅಲ್ಲಿ ಬಲಿಯಾಗಿದೆ. ಮತ್ತು ಮಳೆ ಇಲ್ಲ, ಉದ್ಯೋಗ ಇಲ್ಲ, ನಾವು ಹೋದಂತಹ ಗ್ರಾಮಗಳಲ್ಲಿ ಕರೆಂಟ್ ಇಲ್ಲದೇ ರಾತ್ರಿ ವೇಳೆಯಲ್ಲಿ ಆ ಗ್ರಾಮಗಳಿಗೆ ಹೋಗುವುದಕ್ಕೆ ಆಗುವುದಿಲ್ಲ. ಜೂಜಿನ ಹಾವಳಿ ಎಷ್ಟರ ಮಟ್ಟಿಗೆ ಆಗಿದೆ ಎಂದರೆ ಉದಾಹರಣೆಗೆ ಮಧುಗಿರಿಯಲ್ಲಿ ನಡೆಯು ತ್ತಿರುವಂಥದ್ದನ್ನು ತರಿಸಿ ನೋಡಿ. ಮಧುಗಿರಿ ತಾಲ್ಲೂಕುನಲ್ಲಿ ದೊಡ್ಡೂರು ಹೋಬಳಿಯ ಬಡವರಹಳ್ಳಿ ಎಂದು ಒಂದು ದೊಡ್ಡ ಗ್ರಾಮ ಇದೆ. ಅಲ್ಲಿ ಪೋಲೀಸ್ ಔಟ್ ಪೋಸ್ಟ್ ಇದೆ. ಮೊನ್ನೆ ನಾನು ಹೋದಂತಹ ಕಾಲದಲ್ಲಿ ಅಲ್ಲಿಗೆ ಬಹಳ ಹಿರಿಯರುಗಳು ಬಂದು ಬಹಳ ವ್ಯಥೆಯಿಂದ ಏನು ಹೇಳಿದರು ಎಂದರೆ, ಜೂಜಿನ ದಂಧೆ ಇದೆ, ಅದೇ ರೀತಿಯಲ್ಲಿ ಪ್ರತಿಯೊಂದು ಗ್ರಾಮಗಳಲ್ಲಿ ಈ ರೀತಿಯಾದಂತಹ ಒಂದು ದೊಡ್ಡ ಗ್ಯಾಂಗ್ ಇದೆ. ಇದರಲ್ಲಿ ಪ್ರತಿಷ್ಠವಾದಂತಹ ವ್ಯಕ್ತಿಗಳೇ ಆ ಒಂದು ಗ್ಯಾಂಗ್‌ನಲ್ಲಿ ಇದ್ದಾರೆ. ಆ ರೀತಿಯಾದಂತಹ ವ್ಯಕ್ತಿಗಳು ಬಂಡವಾಳವನ್ನು ಹಾಕಿಕೊಂಡು, ಮಟ್ಕಾ ಏನು ಬಾಂಬೆ ಬೇಸಿನ್ ಎಂದು ಏನಿದೆ ಓಪನ್, ಕ್ಲೋಸ್ ಎಂದು ನಂಬರ್ ಬರುತ್ತದೆಯಂತೆ, 50 ಪೈಸೆಯನ್ನು ಕಟ್ಟಿದ್ದರೆ 40 ರೂಪಾಯಿಗಳು, 1 ರೂಪಾಯಿಗಳನ್ನು ಕಟ್ಟಿದ್ದರೆ ಆ ನಂಬರ್ ಬಂದರೆ 80 ರೂಪಾಯಿಗಳು ಕೊಡುತ್ತೇವೆಂದು ತುಂಬಾ ಅಟ್ರಾಕ್ಟ್ ಮಾಡಿ, ಅಲ್ಲಿ ತೆಗೆಯತಕ್ಕಂತಹ ನಂಬರ್ ಬೇರೆ ಇಲ್ಲಿ ತೋರಿಸುವಂತಹ ನಂಬರ್ ಬೇರೆ ಎಷ್ಟೊಂದು ಮೋಸವಾಗಿ ನಡೆಯುತ್ತದೆಂದರೆ, ಯಾವನೋ ಒಂದು ನಂಬರ್‌ನ್ನು ಹೇಳಿದರೆ ಅದನ್ನು ಬಸ್‌ನ ಸೈಡ್‌ನಲ್ಲಿ ಬರೆದು ಇನ್ನೊಂದು ನಮ್ಮ ತೂಬಿನಕೆರೆ ಬರುತ್ತದೆ. ಅಲ್ಲಿ ಬಸ್‌ನ ಸೈಡ್‌ನಲ್ಲಿ ಬರುವ ನಂಬರನ್ನು ನೋಡಿ ಆ ನಂಬರ್‌ನ್ನು ಹಾಕಿ ಹೇಳುತ್ತಾರೆ. ಇದರಲ್ಲಿ ಬಹಳಷ್ಟು ಜನ ಬಡವರು, ಮಧ್ಯಮ ವರ್ಗದವರು ಇದೊಂದು ಬಹಳ ದೊಡ್ಡ ಸಂಖ್ಯೆಯಲ್ಲಿ ನಡೆಯುತ್ತಿದೆ ಎಂದು ಹೇಳಿದರೆ ತಪ್ಪೇನೂ ಆಗುವುದಿಲ್ಲ. ಅಲ್ಲಿ ನಮ್ಮ ಸ್ನೇಹಿತರು ಹೇಳುವ ಪ್ರಕಾರ ಈ ಜೂಜಾಟವನ್ನು ನಡೆಸತಕ್ಕಂಥವರು ಹೀರೋ ಹೊಂಡಗಳು, ಕಾರುಗಳು, ಟ್ರ್ಯಾಕ್ಟರ್‌ಗಳು ಕೊಳವೆ ಭಾವಿಗಳನ್ನು ಹಾಕಿಸಿಕೊಂಡು ಸುಖವಾಗಿದ್ದರೆ, ಬಡವರ ಶೋಷಣೆ ಇಷ್ಟೊಂದು ಮುಕ್ತವಾಗಿ ನಡೆಯುತ್ತಿರುವುದನ್ನು ನೋಡಿದರೆ ಪೋಲೀಸರ ನಿಷ್ಕ್ರಿಯತೆ ಎದ್ದು ಕಾಣುತ್ತಿದೆ. ಪೋಲೀಸರು ಇದರಲ್ಲಿ ಶಾಮೀಲಾಗಿದ್ದಾರೆಂದರೆ ಅದು ಉತ್ಪ್ರೇಕ್ಷೆ ಏನೂ ಅಲ್ಲ. ಪೋಲೀಸ್ ಸ್ಟೇಷನ್ ಇರತಕ್ಕ ಜಾಗದಲ್ಲೇ ಈ ರೀತಿ ನಡೆಯುತ್ತಿರುವುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಅಂಗೈ ಹುಣ್ಣಿಗೆ ಕನ್ನಡಿ ಏನೂ ಬೇಕಾಗಿಲ್ಲ.

ಅಧ್ಯಕ್ಷರು :- ತಾವು ಸೀನಿಯರ್ ಮೆಂಬರ್. ಗಮನ ಸೆಳೆಯುವ ಸೂಚನೆ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಮಾಡಿದ ಮೇಲೆ ಸ್ಪಷ್ಟೀಕರಣವನ್ನು ಮಾತ್ರ ತಾವು ಕೇಳಬೇಕು. ಭಾಷಣವನ್ನು ಮಾಡುವಂತಿಲ್ಲ.

ಶ್ರೀ ಆರ್. ನಾರಾಯಣ್ :- ಮಾನ್ಯ ಮಂತ್ರಿಗಳು ಕ್ರಮವನ್ನು ತೆಗೆದು ಕೊಂಡಿದ್ದರೂ ಅವರ ಹೇಳಿಕೆಯಿಂದ ನಮಗೆ ಆಷ್ಟೇನೂ ಸಮಾಧಾನವಾಗಿಲ್ಲ. ಇನ್ನೂ ಸಾಕಷ್ಟು ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಅಲ್ಲಿ ನಡೆಯುತ್ತಿರುವ ನಿಜಸ್ಥಿತಿಗೂ, ತಮ್ಮ ಹೇಳಿಕೆಗೂ ಆಜಗಜಾಂತರ ವ್ಯತ್ಯಾಸ ಇದೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ಸದನದ ಸಮಿತಿಯನ್ನೇ ರಚನೆ ಮಾಡಿ. ಏಕೆಂದರೆ ಅಲ್ಲಿ ಅದು ಆಷ್ಟೊಂದು ವ್ಯಾಪಕರೀತಿಯಲ್ಲಿ ಬಡಮರ ಶೋಷಣೆ ನಡೆಯುತ್ತಿದೆ. ನಿಜವಾಗಿ ಇದೊಂದು ಸಾಮಾಜಿಕ ಪಿಡುಗು ಆಗಿದೆ. ಆದ್ದರಿಂದ ಇದರ ಬಗ್ಗೆ ಒಂದು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಹೇಳಿಕೆಯಲ್ಲಿ ಕೆಲವಾರು ಸತ್ಯಾಂಶ ಇದ್ದರೂ ಕೂಡ ಇದರ ಬಗ್ಗೆ ಇನ್ನೂ ತೆಗೆದುಕೊಳ್ಳ ಬೇಕಾದಂಥ ಕ್ರಮದ ಬಗ್ಗೆ ಆಗಲಿ, ಕಾಳಜಿ ಆಗಲಿ ಇಲ್ಲ. ಅಥವಾ ಪೋಲೀಸ್ ಇಲಾಖೆಯ ಮೇಲೆ ತಾವು ಹೊರಿಸಿರತಕ್ಕ ಜವಾಬ್ದಾರಿ ಏನು ಇದೆ ಅದನ್ನು ಅವರು ಸರಿಯಾದ ರೀತಿಯಲ್ಲಿ ನಿರ್ವಹಿಸುತ್ತಿಲ್ಲ. ಈ ಶೋಷಣೆ ಬಹಳ ಸ್ಪಷ್ಟವಾಗಿ ನಿರಂತರವಾಗಿ ನಡೆಯುತ್ತಿದೆ ಎಂಬ ನನ್ನ ಅಭಿಪ್ರಾಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅವರು ಅದನ್ನು ಯಾವ ರೀತಿ ಬಗೆಹರಿಸುತ್ತಾರೆಂಬುದನ್ನು ನೋಡಬೇಕಾಗಿದೆ.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರವನ್ನು ನೋಡಿದಮೇಲೆ ಅದು ನನಗಂತೂ ಸಮಾಧಾನವನ್ನು ತರಲಿಲ್ಲ. ನಮ್ಮ ಪ್ರಶ್ನೆ ಎಂದರೆ, ಉತ್ತರವನ್ನು ಕೊಟ್ಟಿದ್ದೀರಿ. ಆದರೆ ನಮ್ಮ ಅಭಿಪ್ರಾಯದಲ್ಲಿ ಗ್ರಾಮಾಂತರ ಪ್ರದೇಶ ಎಂದರೆ ಹೋಬಳಿ ಮಟ್ಟ ಮಾತ್ರವಲ್ಲ, ಹಳ್ಳಿಗಳ ಮಟ್ಟದಲ್ಲಿಯೂ ಕೂಡ ಈ ದಂಧೆ ನಡೆಯುತ್ತಿದೆ. ಈ ದಂಧೆಯಲ್ಲಿ ಭಾಗವಹಿಸುವವರು ಯಾರು ಎಂದರೆ ಕೂಲಿಯಿಂದ ಜೀವನ ನಡೆಸುತ್ತಿರುವವರು. ಅವರು 50 ಪೈಸೆ; 1 ರೂ. ಹೀಗೆ ಹಣವನ್ನು ಕಟ್ಟಿ ಕಾಯುತ್ತಿರುವಂಥವರು. ಲಾಭ ಮಾಡಿಕೊಳ್ಳುತ್ತಿರುವವರು ಒಬ್ಬರಾದರೆ ಹಣವನ್ನು ಕಳೆದುಕೊಳ್ಳುತ್ತಿರುವವರು ನೂರಾರು ಜನರು. ಇದರಿಂದಾಗಿ ಹಲವಾರು ಸಮಸ್ಯೆಗಳು ಸೃಷ್ಟಿಯಾಗಿದೆ. ಇದು ಪೋಲೀಸರಿಗೆ ಗೊತ್ತಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಪೋಲೀಸರು ಕೇಸು ಹಾಕಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ; ಪೋಲೀಸರಿಗೆ ಈ ಮಾಹಿತಿ ಗೊತ್ತಿದ್ದೂ ಈ ಕೆಲಸ ನಡೆಯುತ್ತಿದೆ. ತಾವು ಹೇಳುವಂಥ ರೀತಿಯಲ್ಲಿ ಪೋಲೀಸರು ಕ್ರಮವನ್ನು ಕಟ್ಟುನಿಟ್ಟಾಗಿ ತೆಗೆದುಕೊಂಡಿದ್ದರೆ ಇವತ್ತು ಅದು ಹಳ್ಳಿಗಳ ಮಟ್ಟಕ್ಕೆ ಹೋಗುವುದಕ್ಕೆ ಸಾಧ್ಯವಿರುತ್ತಿರಲಿಲ್ಲ. ತಮಗೆ ಉದಾಹರಣೆಗೆ ಹೇಳುವುದಾದರೆ ನಮ್ಮ ಕಳ್ಳಂಬೆಳ್ಳ ಲಿಮಿಟ್‌ನಲ್ಲಿ, ಹುಳಿಯೂರಿನಲ್ಲಿ ನಿಮ್ಮ ಸಬ್ ಇನ್‌ಸ್ಪೆಕ್ಟರ್‌ಗಳೇ ನೇರವಾಗಿ ಇನ್‌ವಾಲ್ವ್ ಆಗಿ ಮಾಡುತ್ತಿರುವುದನ್ನು ತಮ್ಮ ಜೊತೆಯಲ್ಲಿ ವೈಯಕ್ತಿಕವಾಗಿ ಚರ್ಚೆ ಮಾಡಿ ಆನಂತರ ಇಲ್ಲಿ ಗಮನಸೆಳೆಯುವ ಸೂಚನೆಯ ರೂಪದಲ್ಲಿ ತಂದಿದ್ದೇನೆ. ನಿಮ್ಮ ಸಬ್ ಇನ್ಸ್‌ಪೆಕ್ಟರ್‌ಗಳೇ ಈ ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮಲ್ಲಿ ಜಾತ್ರೆಗಳು ಮತ್ತು ಸಂತೆಗಳು ನಡೆಯುವಾಗ ನಿಮ್ಮ ಪೋಲೀಸರೇ ಕೆಲವರಿಗೆ ದುಡ್ಡನ್ನು ಕೊಟ್ಟು ಆಡಿಸುತ್ತಿದ್ದಾರೆ. ಈ ವಿಚಾರವನ್ನು ನಾನು ಸಾಕಷ್ಟು ಸಾರಿ ತಮ್ಮ ಗಮನಕ್ಕೂ ತಂದಿದ್ದೇನೆ. ಇವತ್ತು ನಾವು ಕ್ರಮ ತೆಗೆದುಕೊಂಡಿದ್ದೇವೆಂದು ತಾವು ಏನು ಹೇಳುತ್ತಿದ್ದೀರಿ

ಇದು ನಿಜವಾಗಿಯೂ ನಮಗೆ ಸಮಾಧಾನವನ್ನು ತರುತ್ತಿಲ್ಲ. ಇದರಲ್ಲಿ ಪೋಲೀಸರ ಹಸ್ತಕ್ಷೇಪ ಇದೆ, ಪೋಲೀಸರು ಪರೋಕ್ಷವಾಗಿ ಸಹಾಯ ಮಾಡುತ್ತಿರುವುದರಿಂದ ಇವತ್ತು ಮಟ್ಕಾ ಹಾವಳಿ ಜಾಸ್ತಿ ಯಾಗುತ್ತಿದೆ ಎಂಬುದು ನಮ್ಮ ಅಭಿಪ್ರಾಯ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ದಯವಿಟ್ಟು ಹೇಳಿ.

ಶ್ರೀ ಆರ್. ರೋಷನ್ ಬೇಗ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಜಯಚಂದ್ರಅವರು ನಿನ್ನೆ ತಾನೆ ಈ ವಿಚಾರವನ್ನು ನನಗೆ ಹೇಳಿದರು. ಇದಕ್ಕೆ ಮೊದಲು ಯಾವತ್ತೂ ಇದನ್ನು ಹೇಳಿರಲಿಲ್ಲ. ಅದು ಏನೇ ಇರಲಿ. Mutka and gambling... ಇಡೀ ರಾಜ್ಯದಲ್ಲಿ ಇದೊಂದು ಮಾಫಿಯ ಆಗಿದೆ. Mutka and gambling is a social evil. It has affected lakhs of people..... ಒಂದು ಸ್ಟ್ಯಾಂಡಿಂಗ್ ಆರ್ಡರ್ ಮಾಡಿದ್ದೇವೆ. ಡಿ.ಐ.ಜಿ. ಲೆವೆಲ್‌ನಲ್ಲಿ ಎಸ್. ಪಿ. ಲೆವೆಲ್‌ನಲ್ಲಿ ಪ್ರತಿ ತಿಂಗಳೂ ಒಂದೊಂದು ಮೀಟಿಂಗ್ ಆಗುತ್ತಿರುತ್ತದೆ. ಮಟ್ಕಾ ಗ್ಯಾಂಬ್ಲಿಂಗ್ ಆಗಬಾರದೆಂಬ ಉದ್ದೇಶ ನಮ್ಮದಾಗಿದೆ. ನಾನು ನಮ್ಮ ಪ್ರಯತ್ನವನ್ನು ಮಾಡುತ್ತಲೇ ಇದ್ದೇವೆ. ಈ ಮಟ್ಕಾ ಎಂಬುದು ಚಿಕ್ಕಪುಟ್ಟ ಹಳ್ಳಿಗಳಿಗೂ ವ್ಯಾಪಿಸಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇಂಥ ಪ್ರಕರಣಗಳು ನಮಗೆ ತಿಳಿದಕೂಡಲೇ ಕೇಸುಗಳನ್ನೂ ಕೂಡ ಬುಕ್ ಮಾಡುತ್ತಿದ್ದೇವೆ. ಮಧುಗಿರಿಯಲ್ಲಿ ಇದು ನಡೆಯುತ್ತಿದೆ ಎಂದು ಮಾನ್ಯ ಸದಸ್ಯರಾದ ನಾರಾಯಣ್‌ರವರು ಹೇಳಿದರು. ತುಮಕೂರಿನಲ್ಲಿ ಕೂಡ ಕೇಸುಗಳನ್ನು ಬುಕ್ ಮಾಡಿದೆ; ಅಲ್ಲಿ ರಿಪೋರ್ಟ್ ಆದ ಕೇಸುಗಳು 101; ಅರೆಸ್ಟ್ ಮಾಡಿರತಕ್ಕದ್ದು 197 ಜನರನ್ನು, ಮತ್ತು ಶಿಕ್ಷೆ ವಿಧಿಸಿರತಕ್ಕದ್ದು 152 ಪ್ರಕರಣಗಳಲ್ಲಿ. I am not going only by the reports. It is a social evil. We have to put an end to it. It is a big mafia. The State Government has taken steps to curb it. The mafia people have gone to the court.....

MR. SPEAKER :- The point raised by the Hon'ble Member is that there is a kind of understanding between lower level police personnel and this gamblers. Therefore, what measures, the Government has taken to bring such officers into the book., That is what the hon. Member wants.

SRI. R. NARAYAN :- It is going on under the very nose of police station, police people....

MR. R. ROSHAN BAIG :- Whenever such things are brought to our notice we will not hesitate to take action against the concerned police officers.

MR. SPEAKER :- Probably, before he gets up again, it would be the desire of the hon. Member to suggest to the Government to have some officers who enjoy the confidence of the Government with reputation to constitute something like Flying Sqaud and take surprise inspections to such areas where gambling takes place and also unearth if your officers at the lower level connive with these people and take action. Probably, that is what he wants.

SRI. R. ROSHAN BAIG :- Mr. Speaker, Sir, it is a good suggestion. I must thank you for the same...

MR. SPEAKER :- It is their suggestion not my suggestion.

ಶ್ರೀ ಟಿ. ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ತಮಗೆ ನನ್ನ ಧನ್ಯವಾದಗಳು. ಬಹುಶಃ ಈ ಉತ್ತರ ಸರ್ಕಾರದಿಂದ ಬರುತ್ತದೆಂಬ ನಂಬಿಕೆ ನನಗೆ ಇರಲ್ಲಿಲ್ಲ. ತಾವು ಹೇಳಿದ್ದರ ಮೇಲೆ ಅದು ಬರುತ್ತದೆಂದು ನಂಬಿಕೊಂಡಿದ್ದೇನೆ.

MR. SPEAKER :- Please don't embarrass me...

ಶ್ರೀ ದಿವಾಕರ ಬಾಬು :- ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು :- ದಿವಾಕರ ಬಾಬುರವರೇ, ತಾವೂ ಮತ್ತು ಪ್ರತಾಪ ಚಂದ್ರಶೆಟ್ಟಿಯವರೂ ಕೇಳಿದಿರಿ. ಆದರೆ ಗಮನಸೆಳೆಯುವ ಸೂಚನೆಯಲ್ಲಿ ನಮ್ಮ ನಿಯಮಾವಳಿಗಳ ಪ್ರಕಾರ ಯಾರು ಸಹಿ ಹಾಕಿ ನೋಟೀಸ್ ಕೊಟ್ಟಿರುತ್ತಾರೆ ಅವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಸಿಕ್ಕುತ್ತದೆ.

ಶ್ರೀ ದಿವಾಕರ ಬಾಬು :- ಇದರ ಬ್ಗಗೆ ಒಂದೆರಡು ಕ್ಲ್ಯಾರಿಫಿಕೇಷನ್ಸ್ ಅಷ್ಟೆ.

ಅಧ್ಯಕ್ಷರು :- ತಮಗೆ ಇದರ ಮೇಲೆ ಮಾತನಾಡಲು ಹಕ್ಕು ಇರುವುದಿಲ್ಲ. I want all the hon.Members to kindly spend sometime and read the rules.....

(ಆ) ಬಿ.ಡಿ.ಎ.ನಲ್ಲಿ ನಕಲಿ ದಾಖಲೆಗಳ ಸೃಷ್ಟಿ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :- ಮಾನ್ಯ ಅಧ್ಯಕ್ಷರೇ, ಬಿ.ಡಿ.ಎ.ನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ನಿವೇಶನಗಳನ್ನು ಹಂಚಿಕೆ ಮಾಡಿ ಮುಗ್ಧ ನಾಗರೀಕರನ್ನು ವಂಚಿಸಿರುವ ಬಗ್ಗೆ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

+ **ಶ್ರೀ ಅನಂತ್ ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು)** :-